ತೆಂಗಿನಕಾಯಿ ಕೀಳುವ ಕರಿಯನಿಗೂ ಈಗ ಗಾಂಚಾಲಿ. ಯಾವಾಗ ಫೋನ್ ಮಾಡಿದರೂ ಮೊಬೈಲ್ ನಾಟ್ ರೀಚೆಬಲ್. ಅಂಗಡಿ ಬೀದಿಯಲ್ಲಿ ಉಂಡಾಡಿಯಂತೆ ಅಲೆದುಕೊಂಡಿರುತ್ತಾನೆ. ಒಂದು ಮರಕ್ಕೆ ಹತ್ತಿ ಒಂದು ಕಾಯಿ ಕಿತ್ತರೂ ಇಪ್ಪತ್ತೈದು ರೂಪಾಯಿ ಮುಲಾಜಿಲ್ಲದೆ ಕೊಡಬೇಕು. ಸರ್ಕಾರ ತೊಟ್ಟೆ ಸಾರಾಯಿ ಬಂದ್ ಮಾಡಿದ ಮೇಲೆ ವೈನ್‌ಶಾಪ್ ಗಿರಾಕಿ. ಗಂಟೆಗೊಂದು ನೈನ್ಟಿ ಗುಂಡು ಬೀಳುತ್ತಿರಬೇಕು. ಮೊಬೈಲ್‌ಗೆ ದಿನಕ್ಕೊಂದು ಗಂಟೆಯಾದರೂ ಚಾರ್ಜ್ ಮಾಡಬೇಕು ಅನ್ನೋದೂ ಗೊತ್ತಿಲ್ಲ ಕಮಂಗಿಗೆ. ತಾನು ಮಾತ್ರ ದಿನಪೂರ್ತಿ ಚಾರ್ಜ್ ಮಾಡಿಕೊಂಡಿರ್ತಾನೆ.

ಈ ಕರಿಯನಿಂದಾಗಿ ತಾನು ನಿತ್ಯವೂ ಅಮ್ಮನ ಬಾಯಿಂದ ಬೈಗುಳ ಕೇಳ ಬೇಕು. ಒಂದೊಂದು ಸಲ ಅದೆಷ್ಟು ಸಿಟ್ಟು ಬರುತ್ತೆ ನಾಣಿಗೆ ಅಂದ್ರೆ ತೆಂಗಿನ ತೋಟ, ಹತ್ತು ಮುಡಿ ಭತ್ತದ ಗದ್ದೆಯನ್ನು ಮಾರಿ ಬಿಡಬೇಕು. ಈ ಹಳ್ಳಿಯಲ್ಲಿ ತೋಟ, ಗದ್ದೆ ಅಂತೆಲ್ಲಾ ಸುತ್ತಾಡಿ, ಆಳುಗಳ ಬೆನ್ನು ಹಿಡಿದು ಕೆಲಸ ಮಾಡಿಸೋದು ಅಂದ್ರೆ ಸಾಕಾಗಿ ಹೋಗುತ್ತೆ. ಕಾಟನ್‌ಪೇಟೆ ಕಾಲೇಜಿಗೆ ಹೋಗುವ ನವೀನ್ ಅದೆಷ್ಟು ಸಖತ್ತಾಗಿ ಡ್ರೆಸ್ ಮಾಡಿಕೊಂಡು ಕೂಲಿಂಗ್ಲಾಸ್ ಹಾಕೊಂಡು ಕಾರಲ್ಲಿ ತಿರುಗಾಡುತ್ತಾನೆ? ಅವನಂತೆ ತಾನೂ ದಿನ ಬೆಳಗಾಗುವಷ್ಟರಲ್ಲಿ ಕಾರು, ಬೈಕ್ ಯಾವುದರಲ್ಲಿ ಬೇಕಾದರೂ ತಿರುಗಾಡ ಬಹುದು ತುಂಡು ಗದ್ದೆ ಮಾರಿದ್ರೆ. ಅದಕ್ಕೆ ಅಮ್ಮ ಒಪ್ಪುತ್ತಿಲ್ಲ. ನೀನು ಊರ ಯಜಮಾನ ಅಂತ ಬುದ್ಧಿ ಹೇಳುವುದರಲ್ಲೇ ಅಮ್ಮ ಮುದುಕಿಯಾಗುತ್ತಿದ್ದಾಳೆ. ಹತ್ತನೇ ತರಗತಿ ರಿಸಲ್ಟ್ ಬರುವ ಮೊದಲೇ ಯಜಮಾನಿಕೆ ಹೊರೆ ಹೆಗಲೇರಿತು, ಓದಿಗೆ ಫುಲ್ ಸ್ಟಾಪ್ ಬಿತ್ತು. ಮಗನಿಗೆ ಮೂವತ್ತು ವರ್ಷ ಆಯ್ತು, ಒಳ್ಳೇ ಸಂಬಂಧ ಸಿಕ್ಕಿದ್ರೆ ಮದುವೆ ಮಾಡಬೇಕು ಅಂತೆಲ್ಲಾ ತನ್ನವರೊಂದಿಗೆ ಹೇಳಿಕೊಂಡೇ ಅಮ್ಮ ಕಾಲ ಕಳೆಯುತ್ತಾಳೆ.

ಹೊಟ್ಟೆಗೆ ಸರಿಯಾಗಿ ಊಟವಿಲ್ಲದಿದ್ರೂ ಐಶ್ವರ್ಯಳಂಥ ಸೊಸೆ ತಂದು ಕೊಂಡ್ರೆ ಸಾಕು ಎನ್ನುವ ಈ ಕಾಲದಲ್ಲಿ ಅಮ್ಮ ಇನ್ನೂ ಹಳ್ಳೀ ಗುಗ್ಗುವಿನಂತೆ ಅಕ್ಕಪಕ್ಕದ ಹಳ್ಳಿಗಳಲ್ಲಿರುವ ಹುಡುಗಿಯರನ್ನೇ ಹುಡುಕುತ್ತಿದ್ದಾಳೆ. ಅಮ್ಮನಿಗೆ ಒಪ್ಪಿಗೆ ಆದರೆ ಸಾಕೇ ತಾನು ಒಪ್ಪಬೇಡವೇ? ಜೊತೆಯಲ್ಲಿ ಹೋಗುವಾಗ ಹತ್ತಾರು ಮಂದಿ ತನ್ನ ಸೊಸೆಯನ್ನು ನೋಡಿ ಹೊಟ್ಟೆ ಉರಿಸಿಕೊಳ್ಳಬೇಕು ಅನ್ನುವ ಸಾಮಾನ್ಯ ತಿಳುವಳಿಕೆಯೂ ಬೇಡವೇ?

ಅಪ್ಪ ಕಣ್ಮುಚ್ಚಿದಾಗಿನಿಂದ ತಾನೊಬ್ಬನೇ ಗುದ್ದಾಡಬೇಕಾಗಿದೆ ಎನ್ನುವ ಸಂಕಟ ನಾಣಿಗೆ. ಹಿರಿ ಮಗನಾಗಿರುವ ತಪ್ಪಿಗೆ ಅಪ್ಪನಂತೆ ಊರ ಯಜಮಾನಿಕೆ ಬೇರೆ ಮಾಡಬೇಕು. ಈಗೆಲ್ಲಾ ಪೇಟೆಯಲ್ಲಿ ಓದುವುದರಿಂದ, ಸಿನಿಮಾ ಪಾರ್ಕ್ ಸುತ್ತಾಡಿ ಸೋಷಿಯಲ್ಲಾಗಿ ಹುಡುಗ ಹುಡುಗಿ ತಿರುಗಾಡಿದ್ರೆ ಅದನ್ನೇ ಪಂಚಾಯಿತಿ ಕಟ್ಟೆಗೆ ತಂದು ರಾದ್ಧಾಂತ ಮಾಡುತ್ತಾರೆ. ವಾರಕ್ಕೊಂದು ಇಂಥ ದೂರು ಕೇಳಿ ಕೇಳಿ ಈ ಯಜಮಾನಿಕೆಯೇ ಬೇಡ ಅನ್ನಿಸಿದ್ದೂ ಇದೆ. ಅಪ್ಪನ ಕಾಲದಲ್ಲಿ ಈ ಊರಲ್ಲಿ ಹತ್ತಿಪ್ಪತ್ತು ಮನೆಗಳಿಗೆ ಮಾತ್ರ ಲೈಟಿದ್ದವು. ಈಗ ಬೀದಿ ತುಂಬೆಲ್ಲಾ ಸ್ಟ್ರೀಟ್ ಲೈಟ್ ಹಗಲೂ ರಾತ್ರಿ ಉರಿಯುತ್ತವೆ. ಬಾವಿ ಕಟ್ಟೆಯಲ್ಲಿ ಬಟ್ಟೆ ಒಗೆಯುತ್ತಿದ್ದವರು ಮನೆಗಳಲ್ಲಿ ವಾಷಿಂಗ್ ಮೆಷಿನ್ ಇಟ್ಟುಕೊಂಡಿದ್ದಾರೆ. ಕೊಡಪಾನಗಳಲ್ಲಿ ನೀರು ತರುವ ಕಾಲ ಕಳೆದುಹೋಗಿದೆ. ಮನೆಯೊಳಗೇ ನಲ್ಲಿಗಳಿವೆ. ಊರಿಗೆ ಬಂದವಳು ಹಿಂದಿನಂತೆ ನೀರಿಗೆ ಬರುವುದಿಲ್ಲ. ಇದೆಲ್ಲಾ ಅಮ್ಮನಿಗೆ ಯಾಕೆ ಗೊತ್ತಾಗುತ್ತಿಲ್ಲವೋ ಎನ್ನುವ ಸಂಕಟ ನಾಣಿಗೆ.

ಇದು ಗೋಳೂರು. ಸರಿ ಸುಮಾರು ಎರಡು ಸಾವಿರ ಮನೆಗಳಿಗೆ, ಹತ್ತು ಸಾವಿರ ಜನಸಂಖ್ಯೆ ಇದೆ. ಒಂದೂವರೆ ಸಾವಿರ ಮನೆಗಳಿಗೆ ಜಮೀನಿದೆ. ಭತ್ತ, ಅಡಿಕೆ, ತೆಂಗು, ಬೆಳೆ ಬೆಳೆ ಬೆಳೆಯುತ್ತಾರೆ. ಮನೆಯವರೇ ಗದ್ದೆ, ತೋಟದ ಕೆಲಸ ಮಾಡುತ್ತಾರೆ. ಇತ್ತೀಚೆಗೆ ಕೂಲಿ ಕಾರ್ಮಿಕರ ಸಂಖ್ಯೆಯೂ ಹೆಚ್ಚುತ್ತಿದೆ. ಆದರೂ ಗದ್ದೆ ಕೆಲಸಗಳಿಗೆ ಕೆಲಸಗಾರರ ಬರ. ಊಟ, ತಿಂಡಿ, ಚಹಾ ಸಹಿತ ದಿನಕ್ಕೆ ಇನ್ನೂರು ರೂಪಾಯಿ ಸಂಬಳ ಕೊಡಬೇಕು. ಮೊಬೈಲ್ ಬಂದ ಮೇಲೆ ತಿಂಗಳು ಮೊದಲೇ ಫೋನ್ ಮಾಡಿ ಬುಕ್ ಮಾಡಬೇಕು ಕೆಲಸಕ್ಕೆ. ಊರ ಪಕ್ಕದಲ್ಲೇ ನದಿ ಹರಿದು ಹೋಗುವುದರಿಂದ ನೀರಿಗೇನು ಬರವಿಲ್ಲ. ಒಂದು ಕಾಲದಲ್ಲಿ ಊರ ಯಜಮಾನ ದೊಡ್ಡಣ್ಣನವರ ಟೆರೇಸ್ ಮನೆ ಒಂದನ್ನು ಬಿಟ್ಟರೆ ಉಳಿದವೆಲ್ಲಾ ಹಂಚಿನ ಮನೆಗಳು, ಅಲ್ಲಲ್ಲಿ ಗುಡಿಸಲುಗಳೂ ಇದ್ದವು. ಈಗ ಯಜಮಾನಿಕೆ ನಾಮಕಾವಸ್ತೆ ಇದೆ. ದೊಡ್ಡಣ್ಣರ ಮಗ ನಾಗೇಶ ವಂಶ ಪಾರಂಪರ್ಯವಾಗಿ ಊರ ಯಜಮಾನ. ಆದರೆ ಎಂಎಲ್ಎ ಸಂಪತ್ ಕುಮಾರ್ ಮಾತೇ ಫೈನಲ್. ಪಂಚಾಯಿತಿ ಕಟ್ಟೆಗೆ ತಕರಾರು ಬಂದರೂ ಎಂಎಲ್ಎ ಸ್ಪೀಕರ್ ಫೋನ್‌ನಲ್ಲಿ ಹೇಳಿದ್ದೇ ನ್ಯಾಯ. ಪೊಲೀಸ್ ಸ್ಟೇಶನ್ ಮಂಜೂರಾಗಿದೆಯಂತೆ, ಅದೂ ಬರಬಹುದು. ಆಗ ಪಂಚಾಯಿತಿ ಸ್ಟೇಶನ್ ಗೆ ಟ್ರಾನ್ಸಫರ್ ಆಗುತ್ತವೆ ಬಿಡಿ.

ಅಂದ ಹಾಗೆ ಗೋಳೂರು ಪಂಚಾಯತ್ ಇದೆ. ಕೈ ಪಕ್ಷ, ಕಮಲ ಪಕ್ಷ, ರೈತರ ಪಕ್ಷ, ಇತ್ತೀಚೆಗೆ ಬಡವರ ಪಕ್ಷವೂ ಚಿಗುರುತ್ತಿದೆ. ಆದರೆ ಸಂಪತ್ ಕುಮಾರ್ ಹೇಳಿದವರಿಗೇ ಓಟ್ ಹಾಕಬೇಕು. ಇದರ ಉಸ್ತುವಾರಿ ನೋಡಿ ಕೊಳ್ಳುವ ಜವಾಬ್ದಾರಿ ನಾಣಿ ಅರ್ಥಾತ್ ಊರ ಯಜಮಾನ. ಸಂಪತ್ ಕುಮಾರ್ ತುಂಬಾ ಬಿಜಿಯಾಗಿರುತ್ತಾರೆ. ವರ್ಷಕ್ಕೆ ಒಂದೆರಡು ಸಲ ಈ ಊರಿಗೆ ಬರುತ್ತಾರೆ. ನೇರವಾಗಿ ಅವರ ಕಾರು ಹೋಗುವುದೇ ನಾಣಿ ಮನೆಗೆ. ಅಲ್ಲಿ ನಾಣಿ, ಅವರ ಅಮ್ಮ ಸಭೆ ಮಾಡುತ್ತಾರೆ. ಪಂಚಾಯಿತಿ ಮೆಂಬರ್‌ಗಳು ಕಚೇರಿಯಲ್ಲಿರಬೇಕು. ಕಾರಿನಲ್ಲಿ ಕುಳಿತೇ ಸಂಪತ್ ಕುಮಾರ್ ಅವರಿಗೆ ಕೆಲವು ಅಮೂಲ್ಯ ಸಲಹೆ ಕೊಡುತ್ತಾರೆ. ಅವುಗಳು ಪಾಲನೆ ಆಗಬೇಕು. ಅವರ ಸಲಹೆಗಳೇ ಒಂಥರಾ ಪಂಚಾಯಿತಿ ನಿರ್ಣಯಗಳು. ಸಭೆಯಲ್ಲಿ ಹಾರಾಟ, ಚೀರಾಟ, ಸಭಾತ್ಯಾಗಕ್ಕೆ ಆಸ್ಪದವೇ ಇಲ್ಲ. ತಿದ್ದುಪಡಿಗಂತೂ ಅವಕಾಶ ಇಲ್ಲವೇ ಇಲ್ಲ. ಸಂಪತ್ ಕುಮಾರ್ ಮೊಬೈಲ್‌ನಲ್ಲಿ ಹೇಳಿದ್ದೇ ರೆಸಲ್ಯೂಶನ್.

ಬಹು ಮುಖ್ಯವಾಗಿ ಹೇಳಲೇ ಬೇಕೆಂದರೆ ಗೋಳೂರಲ್ಲಿ ಒಂದು ವೈನ್ ಶಾಪ್ ಇದೆ. ಅದು ಸಂಪತ್ ಕುಮಾರ್ ಅವರ ಪತ್ನಿ ಸಂಬಂಧಿಕರಿಗೆ ಸೇರಿದ್ದು. ನ್ಯಾಯಬೆಲೆ ಅಂಗಡಿ ಎಂಎಲ್ಎ ತಮ್ಮನ ಮಗನ ಹೆಸರಲ್ಲಿದೆ. ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯರು ಸಂಪತ್ ಕುಮಾರ್ ಅವರ ಜಾತಿಯವರು. ಮುಖ್ಯ ನರ್ಸ್ ಪಂಚಾಯಿತಿ ಅಧ್ಯಕ್ಷರ ಪತ್ನಿ. ಮೆಡಿಕಲ್ ಶಾಪ್ ಮಾಲೀಕರು ಎಂಎಲ್ಎ ಖಾಸಾ ದೋಸ್ತ್. ಪಂಚಾಯತ್ ಕಾರ್ಯದರ್ಶಿ ಮಾತ್ರ ಬೇರೆ ಊರಿಂದ ಹೊಸದಾಗಿ ವರ್ಗವಾಗಿ ಬಂದವರು. ಆದರೆ ಎಂಎಲ್ಎ ಸಾಹೇಬರಿಗೆ ತುಂಬಾ ಬೇಕಾದವರ ಸಂಬಂಧಿ.

ಗೋಳೂರು ವೇಗವಾಗಿ ಬೆಳೆಯುತ್ತಿದೆ. ಎಂಎಲ್ಎ ಸಂಪತ್ ಕುಮಾರ್ ಶಾಸಕರ ತಂಡದಲ್ಲಿ ಜಪಾನ್, ಚೀನಾ, ಥೈಲ್ಯಾಂಡ್ ಪ್ರವಾಸ ಮಾಡಿ ಬಂದಿದ್ದಾರೆ. ಅವರು ಆ ದೇಶಗಳಿಗೆ ಹೋಗಿದ್ದು, ಅಲ್ಲಿ ಏನೆಲ್ಲ ಪ್ರಗತಿಯಾಗಿದೆ ಎನ್ನುವ ವಿಡಿಯೊ ಮಾಡಿಸಿ ತಂದಿದ್ದಾರೆ. ಊರವರನ್ನೆಲ್ಲಾ ಸೇರಿಸಿ ರಾತ್ರಿ ಹತ್ತು ಗಂಟೆ ತನಕ ಎರಡೆರಡು ಸಲ ವಿಡಿಯೊ ನೋಡಿಸಿದ್ದಾರೆ. ಪೇಟೆಯಲ್ಲಿ ಓದುತ್ತಿರುವ ನವೀನ್, ಶ್ರೇಯ, ಅಮರ್, ಸಪ್ನಾ ಅಂತೂ ಥ್ರಿಲ್ ಆಗಿದ್ದಾರೆ. ಗೋಳೂರಿಗೆ ನ್ಯೂಲುಕ್ ಬರಬೇಕು ಅಂತ ಓಪನ್ ಆಗಿ ತುಂಬಿದ ಸಭೆಯಲ್ಲಿ ವಿಡಿಯೊ ನೋಡಿ ಚಿಯರ್ ಮಾಡಿದ್ದಾರೆ. ಈ ವಿಷಯ ಎಂಎಲ್ಎ ಅವರ ಕಿವಿಗೆ ಆ ಕ್ಷಣದಲ್ಲೇ ತಲುಪಿದೆ. ನಾಣಿಗೂ ವಿಡಿಯೊ ಖುಷಿಕೊಟ್ಟಿದೆ. ಆದರೆ ನಾಣಿ ಅಮ್ಮನಿಗೆ ಮಾತ್ರ ಅಷ್ಟೊಂದು ಇಷ್ಟವಾಗಿಲ್ಲವಂತೆ. ಹಳೆ ತಲೆಮಾರಿನವರಿಗೆ ವಿದೇಶಿ ಮೋಜು, ಮಸ್ತಿ ಗೊತ್ತಿಲ್ಲದ ಕಾರಣ ಆ ಖುಷಿ ಸಹಜ.

ವಿಡಿಯೊದಲ್ಲಿ ನೋಡಿದ ರಸ್ತೆಗಳು, ಮಹಲುಗಳು, ನೈಟ್ ಬಾರ್, ಬ್ಯೂಟಿ ಪಾರ್ಲರ್ ನಾಣಿಗೂ ಥ್ರಿಲ್ ಕೊಟ್ಟಿದೆ. ಮದುವೆ ಆದ ಮೇಲೆ ಹನಿಮೂನ್‌ಗೆ ಸಿಂಗಾಪುರ, ಥೈಲ್ಯಾಂಡ್‌ಗೆ ಫ್ರೀ ಟ್ರಿಪ್ ಸ್ಪಾನ್ಸರ್ ಮಾಡುವುದಾಗಿ ಎಂಎಲ್ಎ ಸಾಹೇಬರು ಹೇಳಿದ ಮೇಲಂತೂ ನಾಣಿ ವಿದೇಶಿ ಕಂಪೆನಿಗಳು ಗೋಳೂರಿಗೆ ಬರಲಿ ಎನ್ನುತ್ತಿದ್ದಾರೆ. ನಿಜ ಹೇಳಬೇಕೆಂದರೆ ಗೋಳೂರಿನ ಯುವಕರು ಹಿಂದೆಂದೂ ಇರದಷ್ಟು ಚುರುಕಾಗಿದ್ದಾರೆ. ಯುವಕರೆಲ್ಲಾ ಸೇರಿಕೊಂಡು ನ್ಯೂವಿಜ್ ಅಸೋಸಿಯೇಷನ್ ಹೆಸರಲ್ಲಿ ಎಂಎಲ್ಎಯವರಿಗೆ ಮೆಮೊರಾಂಡಮ್ ಕೊಟ್ಟಿದ್ದಾರಂತೆ. ಗೋಳೂರು ಉದ್ಧಾರಕ್ಕೆ ನಾವು ನಿಮ್ಮಂದಿಗಿದ್ದೇವೆ, 'ಹಳ್ಳಿ ವನವಾಸ ಸಾಕು, ಪಟ್ಟಣ ವಾಸ ಬೇಕು' ಎನ್ನುವ ಸ್ಲೋಗನ್ ಬರೆದು ಸಹಿ ಮಾಡಿದ್ದಾರಂತೆ. ಈ ಸಂಘಕ್ಕೆ ನಾಣಿಯೇ ಪ್ರೆಸಿಡೆಂಟ್.

ಆದರೆ ನಾಣಿ ಅಮ್ಮ ಮಾತ್ರ ಅಪಸ್ವರ ತೆಗೆದಿದ್ದಾರೆ. ಅವರ ವಯಸ್ಸಿನವರು ಕೂಡಾ ಅದೇ ರಾಗ ಎಳೆದಿರುವುದು ಎಂಎಲ್ಎ ಸಂಪತ್ ಕುಮಾರ್ ಗರಂ ಆಗಲು ಕಾರಣವಾಗಿದೆಯೆಂದು ನಾಣಿಯೇ ನ್ಯೂವಿಜ್ ಅಸೋಸಿಯೇಷನ್ ವರ್ಕಿಂಗ್ ಕಮಿಟಿ ಸಭೆಗೆ ತಿಳಿಸಿರುವುದು ಖಾತ್ರಿ. ಗೋಳೂರಲ್ಲಿ ವಿದೇಶಿ ವಿಡಿಯೊ ನೋಡಿದ ಮೇಲೆ ಯುವಕರು, ಹಿರಿಯರು ಬಣಗಳಾಗುತ್ತಿದ್ದಾರೆ. ಮನೆಯೊಳಗೆ ಅಪ್ಪ ಮಕ್ಕಳ ಮಧ್ಯೆ ಸಣ್ಣಪುಟ್ಟ ಮಾತಿನ ಚಕಮಕಿ ನಡೆಯುತ್ತಿರುವುದು ಗುಟ್ಟೇನಲ್ಲ. ಯುವಕರು ಹಾದಿ ತಪ್ಪುತ್ತಿದ್ದಾರೆ ಎನ್ನುವ